# ಕದವನಿಕ್ಕಿದಳಿದೆಕೊ ಗಯ್ಯಾಳಿ ಮೂಳಿ

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** The lyrics in Ref. 2 are given without highlights. The wordings in Ref. 3 are similar to Ref. 2 except one word which is given in yellow highlights. But the lyrics are different in Ref. 1 and are given separately in green highlights.
5. **Note:** Singer has followed the lyrics as in Ref. 2.

ರಾಗ ಮಧ್ಯಮಾವತಿ ಆದಿ ತಾಳ

ಕದವ ಮುಚ್ಚಿದಳಿದೆಕೋ ಗೈಯಾಳಿ ಮೂಳಿ || ಪ ||

ಕದವ ಮುಚ್ಚಿದಳಿದೆಕೋ ಚಿಲುಕ ಅಲ್ಲಾಡುತ್ತಿದೆ
ಒದಗಿದ್ದ ಪಾಪವು ಹೋದೀತು ಹೊರಗೆಂದು || ಅಪ ||

ಭಾರತ ರಾಮಾಯಣ (ಪುಣ್ಯ ಕಾವ್ಯಂಗಳ) (ಪಂಚರಾತ್ರಾಗಮ)
ಸಾರ ತತ್ವದ ಬಿಂದು ಸೇರೀತು ಒಳಗೆಂದು || 1 ||

ಅಂದುಗೆ ಕಿರುಗೆಜ್ಜೆ ಮುಂಗಾಲಿಲಳವಟ್ಟ
ಧಿಂ ಧಿಮಿ ಧಿಮಿಕೆಂದು ಕುಣಿವ ದಾಸರ ಕಂಡು || 2 ||

ನಂದನ ಕಂದ ಗೋವಿಂದ ಮುಕುಂದನ
ಚಂದವಾದ ಧ್ವನಿ ಹೋದೀತು ಕರ್ಣಕೆಂದು || 3 ||

ಹರಿ ಶರಣರ ಪಾದ ಸರಸಿಜ ಯುಗಳದ
ಪರಮ ಪಾವನವಾದ ರಜವು ಬಿದ್ದೀತೆಂದು || 4 ||

ಮಂಗಳ ಮೂರುತಿ ಪುರಂದರ ವಿಠಲನ
ತುಂಗ ವಿಕ್ರಮ ಪದದಂಗುಳಿ ಸೋಕೀತೆಂದು || 5 ||

**Note:** The lyrics given below are as the book in Ref. 1. They are highlighted in green.

ರಾಗ: ಪೂರ್ವಿ ತಾಳ: ಆದಿ

ಕದವನಿಕ್ಕಿದಳಿದೆಕೊ ಗಯ್ಯಾಳಿ ಮೂಳಿ || ಪ ||

ಕದವನಿಕ್ಕಿದಳಿದೆಕೊ ಚಿಲುಕವಲ್ಲಾಡುತಿದೆ
ಒಳಗಿದ್ದ ಪಾಪವು ಹೊರಗೆ ಹೋದೀತೆಂದು || ಅಪ ||

ಭಾರತ – ರಾಮಾಯಣ ಪಂಚರಾತ್ರಾಗಮ
ಸರಾತತ್ವದ ಬಿಂದು ಕಿವಿಗೆ ಬಿದ್ದೀತೆಂದು || ೧ ||

ಹರಿಯ ಪಾದಾಂಬುಜ ಯುಗಳವ ನೆನೆವ
ಭಕ್ತರ ಪಾದದರಾಜ ಒಳಗೆ ಬಿದ್ದೀತೆಂದು || ೨ ||

ಮಂಗಳ ಮೂರುತಿ ಪುರಂದರ ವಿಠ್ಠಲನ
ತುಂಗ ವಿಕ್ರಮಪಾದ ಅಂಗಳ ಪೊಕ್ಕೀತೆಂದು || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ನಿತ್ಯ ಯಾತ್ರೆಯ ಸಂದರ್ಭದಲ್ಲಿ ಒಂದು ದಿನ ಯಾವಳೋ ಹೆಂಗಸು, ದಾಸರು ಮನೆಯ ಮುಂದೆ ನಿಂತಂತೆಯೇ, ಮನೆಬಾಗಿಲು ಮುಚ್ಚಿಕೊಂಡು ಒಳಗೆ ಹೋದುದು ಇಲ್ಲಿನ ಸಂದರ್ಭ. ಅದನ್ನು ನೋಡಿ ದಾಸರು ನಗೆಯಾಟವಾಡುತ್ತಾರೆ.

**ಚಿಲುಕ ಅಲ್ಲಾಡುತಿದೆ** – ಆಗಲೇ ಬಾಗಿಲು ಮುಚ್ಚಿದ್ದನ್ನು ತಿಳಿಸುವಂತೆ ಹೊರಗೆ ಅಗುಳಿ ಅಲುಗಾಡುತ್ತಿದೆ.

**ಒಳಗಿದ್ದ ಪಾಪವು...** – ಮನೆಗೆ ಬಾಗಿಲು ಎರಡು ಪ್ರಯೋಜನಗಳಿಗಾಗಿ; ಒಳಗಿದ್ದವರು ಹೊರಗೆ ಹೋಗಲು, ಹೊರಗಿದ್ದವರು ಒಳಗೆ ಬರಲು. ಪ್ರಾಪಂಚಿಕ ಜನರಿಗೆ ಒಳಗಿರುವುದು ಆಸೆ, ಅಸೂಯೆ ಮೊದಲಾದ ಕೆಟ್ಟ ಸಾಮಗ್ರಿ. ಇವು ಹೊರಗೆ ಹೋಗದಂತೆ ಮನಸ್ಸನ್ನು ಅವುಗಳಲ್ಲೇ ನೆಟ್ಟು ಅವನ್ನು ಬೇರೂರಿಸುತ್ತಾರೆ. ಇದೇ 'ಕದವನ್ನು ಮುಚ್ಚುವುದು.'

**ಭಾರತ ರಾಮಾಯಣ...** – ಶಾಸ್ತ್ರ ಗ್ರಂಥಗಳಲ್ಲಿರುವ ಪಾರಮಾರ್ಥಿಕ ತತ್ತ್ವದ ಕಡೆ ಜನರ ಮನಸ್ಸು ಹರಿಯುವುದಿಲ್ಲ.

**ಅಂದುಗೆ** – ಕಾಲುಂಗುರ.

**ತುಂಗ ವಿಕ್ರಮ ಪದದ** – ವಿಷ್ಣುವಿನ ತ್ರಿವಿಕ್ರಮಾವತಾರದ ನೆನಪು ಇಲ್ಲಿದೆ. ಭೂಮಿ, ಅಂತರಿಕ್ಷ, ವ್ಯೋಮ ಮೂರೂ ಸ್ಥಳಗಳನ್ನು ಆಕ್ರಮಿಸಿಕೊಂಡ ಸಂಗತಿ 'ತ್ರೀಣಿ ಪದಾ ವಿಚಕ್ರಮೇ ವಿಷ್ಣುಃ' ಎಂಬ ವೇದದ ಮಾತಿನಲ್ಲಿ ಇರುವುದನ್ನು ದಾಸರು ಇಲ್ಲಿ 'ತುಂಗ ವಿಕ್ರಮಪದ'ವೆಂದು ಬಣ್ಣಿಸಿದ್ದಾರೆ.

**Classification:** Keerthane
**Ankita:** purandara vittala
**Location:** NA
**Category:** jeevana darshana
**Sub-Category:** gayyali, bagilu, gejje, govinda, mukunda, sharana, papa, purana, punya, Krishna, Vishnu, mangala, kivi,
**Pravachana:** NA
**Explanation:** NA